ಔಷಧಿಗಳ ಮೇಲಿನ ತೆರಿಗೆ

೧೧೪೧. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಔಷಧಿಗಳ ಮೇಲೆ ಇರತಕ್ಕ ತೆರಿಗೆಯನ್ನು ಹೋಲಿಸಿದಲ್ಲಿ, ಕರ್ನಾಟಕ ರಾಜ್ಯದಲ್ಲಿ ಔಷಧಿಗಳ ಮೇಲೆ ಶೇಕಡ ೮ ರಿಂದ ೧೨ ಹೆಚ್ಚು ತೆರಿಗೆ ಇರುವುದು ನಿಜವೇ ;

ಆ) ಗಡಿ ಪ್ರದೇಶದಲ್ಲಿರುವ ಔಷಧ ವ್ಯಾಪಾರಿಗಳು ಸುಳ್ಳು ದಾಖಲೆಗಳನ್ನು ಇಟ್ಟುಕೊಂಡು ಪಕ್ಕದ ರಾಜ್ಯಗಳಿಂದ ಔಷಧಿಯನ್ನು ಖರೀದಿಸುವುದರಿಂದ ರಾಜ್ಯದ ರಾಜಸ್ವ ನಷ್ಟವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಸರ್ಕಾರದವರು ಔಷಧಿಗಳ ಮೇಲಿನ ತೆರಿಗೆಯನ್ನು ಪಕ್ಕದ ರಾಜ್ಯಗಳಲ್ಲಿ ಇರುವಂತೆ ನಿಗದಿಪಡಿಸಲು ತೆಗೆದುಕೊಂಡ ಕ್ರಮವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಇಲ್ಲ.

ಆ) ಇಲ್ಲ.

ಇ) ಉಪ ಪ್ರಶ್ನೆಗಳು (ಅ) ಮತ್ತು (ಆ)ಗೆ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಹುಚ್ಚರ್ಜಿ ನಾಯಿ ಕಡಿತ ಪ್ರಕರಣಗಳು

೧೧೪೩. ಶ್ರೀಮತಿ ಮನೋರಮಾ ಮದ್ವರಾಜ್ (ಉಡುಪಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫–೮೬, ೧೯೮೬–೮೭ ಮತ್ತು ೧೯೮೭–೮೮ ಸಾಲಿನಲ್ಲಿ ರಾಜ್ಯದಲ್ಲಿ ಹುಚ್ಚುನಾಯಿ ಕಡಿತ ಪ್ರಕರಣಗಳು, ಚಿಕಿತ್ಸೆ ಒದಗಿಸಿದವರ ಸಂಖ್ಯೆ ಮತ್ತು ಸಾವಿಗೀಡಾದವರೆಷ್ಟು ?

ಆ) ಈ ಸಾಲುಗಳಲ್ಲಿ ಎಲ್ಲಾ ಆಸ್ಪತ್ರೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹುಚ್ಚುನಾಯಿ ಕಡಿತಕ್ಕೆ ಲಸಿಕೆ ಸರಬರಾಜು ಆಗಿದೆಯೇ ? (ಜಿಲ್ಲಾವಾರು ಅಂಕಿ ಅಂಶಗಳನ್ನು ಕೊಡುವುದು).

ಇ) ೧೯೮೭–೮೮ರ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹುಚ್ಚುನಾಯಿ ಕಡಿತಕ್ಕೆ ಬೇಕಾದ ಲಸಿಕೆಯ ಕೊರತೆ ಇದ್ದುದು ಪಾಸ್ತವವೇ ?

ಈ) ಹಾಗಿದ್ದಲ್ಲಿ, ಈ ಕೊರತೆಗೆ ಕಾರಣರಾದ ಜವಾಬ್ದಿಗೆ ಶಿಕ್ಷೆ ವಿಧಿಸಲಿಕ್ಕೆ ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ನಾಯಿಕಡಿತದ ಪ್ರಕರಣಗಳ ವಿವರಗಳು ಈ ಕೆಳಕಂಡಂತೆ ಇವೆ,

	೧೯೮೫–೮೬	೧೯೮೬–೮೭	೧೯೮೭–೮೮ (ಡಿಸೆಂಬರ್ ೧೯೮೭ರ ವರೆಗೆ)
ನಾಯಿಕಡಿತ ಪ್ರಕರಣಗಳು	೯೧೫೨	೧೦೪೪೭	೯೧೧೩
ಚಿಕಿತ್ಸೆ ಪಡೆದವರು	೮೬೫೬	೧೦೩೧೦	೯೦೧೩
ಮೃತಪಟ್ಟವರು	೧೧೨	೧೨೩	೭೯